ಹಾಲಿ ಕಾರ್ಯನಿರ್ವಹಿಸುತ್ತಿರುವ ವಾಚನಾಲಯಗಳನ್ನು ಆಧುನಿಕ ತಂತ್ರಜ್ಞಾನದ ಮಾಹಿತಿಯುಳ್ಳ ವಾಚನಾಲಯದ ವ್ಯವಸ್ಥೆ ಮಾಡುವ ಬಗ್ಗೆ ರಾಜ್ಯಮಟ್ಟದಲ್ಲಿ ಯೋಜಿಸಿ, ನಂತರ ಜಿಲ್ಲಾ ಹಾಗೂ ನಗರ ಮಟ್ಟದಲ್ಲಿ ಹಂತ ಹಂತವಾಗಿ ಆಧುನಿಕ ತಂತ್ರಜ್ಞಾನದ ವ್ಯವಸ್ಥೆ ಮಾಡಲಾಗುವುದು.

ಮಂಗಳೂರು ನಗರದಲ್ಲಿ ಒಂದು ಸಂಚಾರಿ ಗ್ರಂಥಾಲಯ ಕಾರ್ಯನಿರ್ವಹಿಸುತ್ತಿರುವುದು. ಸಂಚಾರಿ ಗ್ರಂಥಾಲಯ ಬೇಡಿಕೆಗನುಸಾರವಾಗಿ ಈ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಲಾಗುವುದು.

ಮಂಗಳೂರು ನಗರ ಕ್ಷೇತ್ರದಲ್ಲಿರುವ ಖಾಲಿ ಇರುವ ಎಲ್ಲಾ ಹುದ್ದೆಗಳನ್ನು ಈಗಾಗಲೇ ಭರ್ತಿ ಮಾಡಲಾಗಿದೆ.

ಆ) ಮಂಗಳೂರು ಕ್ಷೇತ್ರದ ನಗರ ವ್ಯಾಪ್ತಿಯ ಗ್ರಂಥಾಲಯಗಳಿಗೆ ಕೆ.ಪಿ.ಎಲ್. ಆಕ್ಟ್ ಸೆಕ್ಷನ್ 30ರ ಪ್ರಕಾರ ಆಸ್ತಿ ತೆರಿಗೆ ಮೇಲೆ ವಿಧಿಸುವ ಶೇ. 6 ಸೆಸ್ ರೂ. 5.38 ಲಕ್ಷ ನೀಡಲಾಗಿದೆ. ಹಾಗೂ ನಗರ ಸುಂಕ ಪರಿಹಾರದಿಂದ 1996-97ಕ್ಕೆ ರೂ. 6.26 ಲಕ್ಷ ಬಿಡುಗಡೆ ಮಾಡಿದೆ.

ಮಂಗಳೂರಿನ ಪದವಿ ಪೂರ್ವ ಕಾಲೇಜುಗಳ ಅಭಿವೃದ್ಧಿ

2930 - ಶ್ರೀ ಎಸ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನ ರಥ ಬೀದಿಯಲ್ಲಿರುವ ಸರ್ಕಾರಿ ಮಹಿಳಾ ಪದವಿ ಪೂರ್ವ ಕಾಲೇಜು ಬೊಕ್ಕಪಟ್ಟಣದಲ್ಲಿರುವ ಸರ್ಕಾರಿ ಪದವಿ ಪೂರ್ವ ಕಾಲೇಜು ಹಾಗೂ ಬಲ್ಮಠ ಪದವಿ ಪೂರ್ವ ಕಾಲೇಜು (ಮಹಿಳಾ)ಗಳಿಗೆ ಕೊರತೆಯಿರುವ ಅಧ್ಯಾಪಕರ ನೇಮಕಾತಿ, ಪೀಠೋಪಕರಣಗಳ ಒದಗಿಸುವಿಕೆ ಶಿಕ್ಷಕೇತರ ಸಿಬ್ಬಂದಿಗಳನ್ನು ನಿಯೋಜನೆ ಕಟ್ಟಡಗಳ ಅಭಿವೃದ್ಧಿಗೆ ಪೀಠೋಪಕರಣ ಪ್ರಯೋಗ ಶಾಲೆಗಳಿಗೆ ಉಪಕರಣಗಳನ್ನು ಒದಗಿಸುವುದು ಕಂಪ್ಯೂಟರ್ ತರಗತಿಗೆ ಕಂಪ್ಯೂಟರ್ ಕೊಡಲು ಸರ್ಕಾರ ಯಾವ ಕ್ರಮಕೈಗೊಂಡಿದೆ? (ಪೂರ್ತಿ ವಿವರ ಹಾಗೂ ಕೈಗೊಂಡ ಕ್ರಮಗಳ ವಿವರಗಳನ್ನು ನೀಡುವುದು)

ಶ್ರೀ ಹೆಚ್. ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 1. ಮಂಗಳೂರು ರಥ ಬೀದಿಯ ಪದವಿ ಪೂರ್ವ ಕಾಲೇಜಿನಲ್ಲಿ ಕನ್ನಡ ಹಿಂದಿ ಉಪನ್ಯಾಸಕರ ಹುದ್ದೆ ಖಾಲಿಯಿದ್ದು, ಸಧ್ಯಕ್ಕೆ ಪರ್ಯಾಯ ವ್ಯವಸ್ಥೆ ಮಾಡಿದೆ. ಮಂಗಳೂರು ಬಲ್ಮಠದಲ್ಲಿರುವ ಪದವಿ ಪೂರ್ವ ಕಾಲೇಜಿನಲ್ಲಿ ಇತಿಹಾಸ ಮತ್ತು ಹಿಂದಿ ಹುದ್ದೆಗಳು ಖಾಲಿಯಿದ್ದು ಬೋಧನೆಗೆ ಪರ್ಯಾಯ ವ್ಯವಸ್ಥೆ ಮಾಡಿದೆ.

ಮಂಗಳೂರು ಬೊಕ್ಕಪಟ್ಟಣ ಕಾಲೇಜಿನಲ್ಲಿ ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಕನ್ನಡ ಹುದ್ದೆಗಳು ಖಾಲಿಯಿದ್ದು ಪರ್ಯಾಯ ವ್ಯವಸ್ಥೆ ಮಾಡಲಾಗಿದೆ.

ಸಧ್ಯದಲ್ಲಿಯೇ ಬೇರೆ ಕಾಲೇಜುಗಳಿಂದ ಕೆಲಸವಿಲ್ಲದ ಉಪನ್ಯಾಸಕರನ್ನು ವರ್ಗಾವಣೆಯಿಂದ ನಿಯಮ 32ರ ಕೆಳಗೆ ಅಥವಾ ನೇರನೇಮಕಾತಿಯಿಂದ ಈ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮಕೈಗೊಳ್ಳಲಾಗುವುದು.

2. ಪ್ರತಿ ವರ್ಷವು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪೂರ್ವಭಾವಿ ಸೌಲಭ್ಯಗಳನ್ನು ಒದಗಿಸುವ ಅಡಿಯಲ್ಲಿ ಹಣ ಬಿಡುಗಡೆ ಮಾಡುವ ಮುನ್ನ ಕಳೆದ ನಾಲ್ಕು ವರ್ಷಗಳಲ್ಲಿ ಹಣ ಬಿಡುಗಡೆ ಮಾಡದ ಕಾಲೇಜುಗಳನ್ನು ಗುರುತಿಸಿ ಹಣ ಬಿಡುಗಡೆ ಮಾಡಲಾಗುತ್ತಿರುವುದರಿಂದ ಪ್ರಸ್ತುತ ಸಾಲಿನಲ್ಲಿ ಆದ್ಯತೆ ಮೇರೆಗೆ ಬಲ್ಮಠ ಹಾಗೂ ಬೊಕ್ಕಪಟ್ಟಣ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಹಣ ಬಿಡುಗಡೆ ಮಾಡುವ ಬಗ್ಗೆ ಪರಿಶೀಲಿಸಲಾಗುವುದು. ಆದರೆ ಸರ್ಕಾರಿ ಪದವಿ ಪೂರ್ವ ಕಾಲೇಜು ರಥಬೀದಿಗೆ 1995-96ನೇ ಸಾಲಿನಲ್ಲಿ ಪೂರ್ವಭಾವಿ ಸೌಲಭ್ಯಗಳನ್ನು ಒದಗಿಸುವ ಅಡಿಯಲ್ಲಿ ಈಗಾಗಲೇ ಹಣ ಬಿಡುಗಡೆ ಮಾಡಿರುವುದರಿಂದ ಈ ಬಗ್ಗೆ ಪ್ರಸ್ತುತ ಸಾಲಿನಲ್ಲಿ ಪರಿಗಣಿಸಲು ಸಾಧ್ಯವಾಗುತ್ತಿಲ್ಲ.

ಗುಲ್ಬರ್ಗಾ ಜಿಲ್ಲೆಯಲ್ಲಿ ಹಲವಾರು ನೀರು ಸರಬರಾಜು ಯೋಜನೆಗಳು

2931 - ಶ್ರೀ ರಾಜಾ ವೆಂಕಟಪ್ಪ ನಾಯ್ಕ (ಸುರಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಹಲವಾರು ನೀರು ಸರಬರಾಜು ಯೋಜನೆಗಳು ಅಪೂರ್ಣವಿರುವ ಗ್ರಾಮಗಳ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಕಳೆದ ಮೂರು ವರ್ಷಗಳ ಮಾಹಿತಿಯನ್ನು ಒದಗಿಸುವುದು).

ಆ) ಕಾರಣಗಳೇನು?

ಇ) ಇವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನೀರು ಸರಬರಾಜು ಯೋಜನೆಗಳು ಅಪೂರ್ಣವಿರುವ ಗ್ರಾಮಗಳ ಸಂಖ್ಯೆ 187. ತಾಲ್ಲೂಕು ವಾರು ವಿವರಗಳು ಈ ಕೆಳಗಿನಂತೆ ಇವೆ.

ಕ್ರಮ ಸಂಖ್ಯೆ	ತಾಲ್ಲೂಕಿನ ಹೆಸರು	ಕೊಳವೆ ನೀರು ಸರಬರಾಜು ಯೋಜನೆ ಅಪೂರ್ಣವಿರುವ ಗ್ರಾಮಗಳ ಸಂಖ್ಯೆ
1.	ಅಫಜಲಪುರ	27
2.	ಆಳಂದ	40
3.	ಚಿಂಚೋಳಿ	21
4.	ಚಿತ್ತಾಪುರ	26
5.	ಗುಲ್ಬರ್ಗಾ	37